**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ**

ಸಿ.ಸಿ. ನಂ.67/2023

ಪಿ.ಡಬ್ಯೂ-3

ಸಿಡಬ್ಲ್ಯೂ-3

ಸಾಕ್ಷಿದಾರರ ಹೆಸರು : ಸಂತೋಷ ಕೃಷ್ಣ ಸಿದ್ದಿ

ತಂದೆಯ ಹೆಸರು : ಕೃಷ್ಣ ಸಿದ್ದಿ

ವಯಸ್ಸು : 28 ವರ್ಷ

ಉದ್ಯೋಗ : ದಿನಗೂಲಿ ವಾಚ್ ಮ್ಯಾನ್ ಕೆಲಸ, ರಾಮನಗುಳಿ ರೆಂಜ್

ವಾಸ : ಹಳ್ಳವಳ್ಳಿ, ಅಂಕೋಲಾ.

ದಿನಾಂಕಃ 20-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.ಸ

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ .ಸ. ಆ ರವರಿಂದ:**

1. ನನಗೆ ಚಾಸಾ-1 ರವರ ಪರಿಚಯ ಇರುತ್ತದೆ. ಅವರು ನನ್ನ ಮೇಲಾಧಿಕಾರಿಗಳು. ಚಾಸಾ-2 ರವರು ನನಗೆ ಗೊತ್ತು ಅವರು ನನ್ನತರ ವಾಚ್ ಮ್ಯಾನ್ ಕೆಲಸ ಮಾಡುತ್ತಾರೆ. ನಾನು ಹಳ್ಳವಳ್ಳಿ ಶಾಖೆಯಲ್ಲಿ ಸುಮಾರು 8 ವರ್ಷಗಳಿಂದ ವಾಚ್‌ಮ್ಯಾನ್ ಕೆಲಸವನ್ನು ಮಾಡುತ್ತಿದ್ದೇನೆ. ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿದ್ದ ನಿಪಿ-1 ಅನ್ನು ತೋರಿಸಿದ್ದು, ಅದನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ನಾನು ದಿನಾಂಕ 05-01-2022 ರಂದು ಕಮ್ಮಾಣಿ ಮದ್ದಿನ ಮನೆ ನಾಲದಲ್ಲಿ ಸಹಿ ಹಾಕಿರುತ್ತೇನೆ. ಸದ್ರಿ ಸಹಿಯನ್ನು ನಾನು ಕಾಡು ಹಂದಿಯನ್ನು ಕೊಂದು ಸ್ವಚ್ಚಗೊಳಿಸಿ ಅದರ ಮಾಂಸವನ್ನು ಮಾಡುತ್ತಿದ್ದುದ್ದ ಬಗ್ಗೆ ಸಹಿಯನ್ನು ಹಾಕಿರುತ್ತೇನೆ. ಅರಣ್ಯ ಇಲಾಖಾ ಸಿಬ್ಬಂದಿಯವರು ಸ್ಥಳವನ್ನು ಪರಿಶೀಲನೆ ಮಾಡಿ ವಿದ್ಯುತ್ ಹರಿಸಿದ ಹೈಟೆಕ್ಸ್ ತಂತಿಯನ್ನು ನನ್ನ ಸಮಕ್ಷಮದಲ್ಲಿ ಅಮಾನತು ಪಡಿಸಿಕೊಂಡಿರುತ್ತಾರೆ. ಸದ್ರಿ ಪಂಚಾನಾಮೆಯನ್ನು ಮಧ್ಯಾಹ್ನ 2.00 ರಿಂದ 2.20 ರ ಸಮಯದಲ್ಲಿ ಬರೆಯಲಾಗಿತ್ತು. ಅರಣ್ಯ ಸಿಬ್ಬಂದಿಯವರು ಪಂಚನಾಮೆಯನ್ನು ಮಾಡಿ ಫೋಟೊವನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿದ್ದ ನಿಪಿ-2 ರಿಂದ 7 ಪೋಟೋವನ್ನು ತೋರಿಸಲಾಗಿದ್ದು ಫೋಟೊವನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ

ಇರುವ ಮುಮಾ–1 ಅನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದ್ರಿ ಕಾಡು ಹಂದಿಯನ್ನು 1 ನೇ ಆರೋಪಿಯ ಜಮೀನಿನಲ್ಲಿ ಹೈಟೆಕ್ಸ್ ತಂತಿಯನ್ನು ಬೇಲಿಗೆ ಅಳವಡಿಸಿ ಅದಕ್ಕೆ ವಿದ್ಯುತ್ ಹರಿಸಿ ಕಾಡು ಹಂದಿಯನ್ನು ಕೊಲ್ಲಲಾಗಿದೆ ಎಂದು ಅರಣ್ಯ ಸಿಬ್ಬಂದಿಗಳು ನನಗೆ ಹೇಳಿರುತ್ತಾರೆ. ನಾನು ಹೋದಂತ ಸ್ಥಳದ ಸರ್ವೆ ನಂ.16 ಆಗಿರುತ್ತದೆ ಸದ್ರಿ ಕರೆಂಟವನ್ನು ಹಾಯಿಸಿದ ಸ್ಥಳವು 1 ನೇ ಆರೋಪಿಗೆ ಸೇರಿದ ಸ್ಥಳವಾಗಿರುತ್ತದೆ. ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿರುವ ನಿಪಿ–11 ಅನ್ನು ತೋರಿಸಲಾಗಿದ್ದು ಸಾಕ್ಷಿಯು ಅದರಲ್ಲಿರುವ ಸಹಿಯನ್ನು ಗುರುತಿಸಲಾಗಿದ್ದು, ಅದನ್ನು ನಿಪಿ–11 ಬಿ ಎಂದು ಗುರುತಿಸಲಾಗಿದೆ.

2. ಸದ್ರಿ ಸಹಿಯನ್ನು ನಾನು ದಿನಾಂಕ 07–01–2022 ಮಧ್ದಿನ ಮನೆ ನಾಲದಲ್ಲಿ ಸಹಿಯನ್ನು ಹಾಕಿರುತ್ತೇನೆ. ಸದ್ರಿ ಸಹಿಯನ್ನು ಆ ಕಾಡು ಹಂದಿಯನ್ನು ಅರಣ್ಯ ಸಿಬ್ಬಂದಿಗಳು ಮತ್ತು ನಾವುಗಳು ಸೇರಿ ಸುಟ್ಟಿ ಹಾಕಿದರ ಬಗ್ಗೆ ಪಂಚನಾಮೆಯನ್ನು ಮಾಡಿ ಫೋಟೊವನ್ನು ತೆಗೆದು ನನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ. ಈಗಾಗಲೇ ಗುರುತಿಸಲಾಗಿರುವ ನಿಪಿ–12 ರಿಂದ 14 ರ ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u>** ಆರೋಪಿತರ ಪರ ಶ್ರೀ ಆರ್.ಎನ್.ಎಚ್. ರವರಿಂದ

3. ನನ್ನ ತಂದೆಯು ರಾಮನುಗಳಿ ಸೋಸೈಟಿಯಲ್ಲಿ ಸದಸ್ಯರಾಗಿರುತ್ತಾರೆ. ನನ್ನ ತಂದೆಯು ಅರಣ್ಯ ಇಲಾಖೆಯಲ್ಲಿ ಕೆಲವೊಂದು ಗುತ್ತಿಗೆ ಕಾಮಗಾರಿಯನ್ನು ಮಾಡುತ್ತಾರೆ. ನಮ್ಮ ತಂದೆಯು ಮಾಲ್ಕಿ ಮಾಡಲು ಕೂಡ ಅರಣ್ಯ ಇಲಾಖೆಗೆ ಹೋಗುವುದಿಲ್ಲ. ನೀವು ಸದ್ರಿ ಅರಣ್ಯ ಇಲಾಖೆಯಲ್ಲಿ ವಾಚ್ ಮ್ಯಾನ್ ಕೆಲಸಗಾರನಾಗಿರುವುದರಿಂದ ನೀವು ನಿಮ್ಮ ಮೇಲಾಧಿಕಾರಿಗಳು ಹೇಳಿದ ನಿರ್ದೇಶನವನ್ನು ಕೇಳಬೇಕಾಗಿರುತ್ತದೆ. ಅದೇ ರೀತಿ ನಾನು ವಾಚ್‌ಮ್ಯಾನ್ ಆಗಿ ಕೆಲಸ ಮಾಡುತ್ತಿರುವ ಬಗ್ಗೆ ಅರಣ್ಯ ಇಲಾಖೆಯ ಡೈರಿಯಲ್ಲಿ ನಮೂದಾಗಿರುತ್ತದೆ. ರಾಮನುಗುಳಿ ಅರಣ್ಯ ಇಲಾಖೆಯ ಕಚೇರಿಯಿಂದ ನಮ್ಮ ಮನೆಯು 15 ಕಿ. ಮಿ. ದೂರವಾಗಿರುತ್ತದೆ. ನಾನು ಹಗಲು ಪಾಳಿ ಕೆಲಸವನ್ನು ಮಾಡುತ್ತೇನೆ. ನನ್ನ ಕರ್ತವ್ಯವನ್ನು ಅರಣ್ಯ ಇಲಾಖೆಯ ಗಾರ್ಡ್ ಮತ್ತು ಫಾರೆಸ್ಟರ್ ರವರು ನಿಯೋಜನೆ ಮಾಡುತ್ತಾರೆ. ಸದ್ರಿ ಕೆಲಸಕ್ಕೆ ನಿಯೋಜನೆ ಮಾಡುವಾಗ ನೀವು ಸಹ ಅರಣ್ಯ ಇಲಾಖೆಗೆ ಹೋಗಬೇಕಾಗುತ್ತದೆ ಎಂದರೆ ಸರಿ. ಅದೇ ರೀತಿ ಇಂತಹ ಕಡೆ

ಕೆಲಸಕ್ಕೆ ನಾನು ಹೋಗುತ್ತೇನೆ ಎಂದು ಸಹಿ ಕೂಡ ಮಾಡಬೇಕಾಗುತ್ತದೆ ಎಂದರೆ ಇಲ್ಲ. ನೀವು ಇಂತಹ ದಿನ ಕೆಲಸಕ್ಕೆ ಹೋದ ಬಗ್ಗೆ ದಾಖಲಾತಿ ಅರಣ್ಯ ಕಚೇರಿಯಲ್ಲಿ ಇರುತ್ತದೆಯಾ ಎಂದರೆ ಇಲ್ಲ. ನಿಮ್ಮ ಪ್ರಕಾರ ರಜೆಯನ್ನು ಕೊಡಬೇಕಾದರೆ ಆರ್.ಎಫ್.ಓ. ಅವರಿಗೆ ಕೊಡಬೇಕಾಗುತ್ತದೊ ಅಥವಾ ಇಲ್ಲವೊ ಎಂದರೆ ಇಲ್ಲ. ನನಗೆ ದಿನಗೂಲಿ ಲೆಕ್ಕದಲ್ಲಿ ತಿಂಗಳಿಗೆ ಸಂಬಳ ಬರುತ್ತದೆ. ನೀವು ಕೆಲಸ ಮಾಡಿದರ ಬಗ್ಗೆ ಓ.ಟಿ. ಮಾಡಿದರ ಬಗ್ಗೆ ನಿರ್ಧಾರಿಸಿ ನಿಮ್ಮ ತಿಂಗಳ ಸಂಬಳ ನಿರ್ಧಾರವಾಗುತ್ತದೆ ಎಂದರೆ ಸರಿ. ದಿನಾಂಕ 05-01-2022 ರಂದು ನೀವು ಆ ದಿನ ಕರ್ತವ್ಯಕ್ಕೆ ಹಾಜರಾಗಿದ್ದೀರಿ ಎಂಬ ಬಗ್ಗೆ ಅರಣ್ಯ ಇಲಾಖೆಯಲ್ಲಿ ಯಾವುದೇ ದಾಖಲಾತಿ ಇದೆಯಾ ಎಂದರೆ ದಾಖಲಾತಿ ಇಲ್ಲ ಸಹಿ ಇಲ್ಲ ಆದರೆ ಕೆಲಸ ಮಾಡುತ್ತಿದ್ದೆವು. ನೀವು ಕೆಲಸ ಮಾಡುವುದು ಬಾಯಲ್ಲಿ ಹೇಳುತ್ತಿದ್ದೀರಿ ಬಿಟ್ಟರೆ ಅಧಿಕೃತವಾಗಿ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ದಿನಾಂಕ 05-01-2022 ರಂದು ರಾಮನಗುಳಿ ಕಚೇರಿಗೆ ಬಂದು ಘಟನಾ ಸ್ಥಳಕ್ಕೆ ಹೋದರೊ ಅಥವಾ ಮನೆಯಿಂದ ಹೋದರೊ ಎಂದರೆ ನಾನು ರಾಮನುಗುಳಿ ಕಚೇರಿಗೆ ಹೋಗಿ ನಂತರದಲ್ಲಿ ಸ್ಥಳಕ್ಕೆ ಹೋಗಿರುತ್ತೇನೆ.

4. ಮಧ್ಯಾಹ್ನ 3.30 ರ ಸಮಯದಲ್ಲಿ ರಾಮನುಗುಳಿ ಕಚೇರಿಗೆ ಹೋಗಿರುತ್ತೇನೆ. ಅದರ ನಂತರದಲ್ಲಿ ನಿಮ್ಮನ್ನು ಕರ್ತವ್ಯಕ್ಕೆ ನಿಯೋಜನೆ ಮಾಡಿರುತ್ತಾರಾ ಎಂದರೆ ಹೌದು. ಆ ದಿನ ನನ್ನನ್ನು ಚಾಸಾ-1 ಮತ್ತು 4 ರವರು ಕರ್ತವ್ಯಕ್ಕೆ ನಿಯೋಜನೆ ಮಾಡಿರುತ್ತಾರೆ. ಆ ದಿನ ರಾಮನಗುಳಿಯಿಂದ ನಾನು ಹೊರಟಗಾ ಚಾಸಾ-2 ರವರು ನನ್ನ ಜೊತೆ ಇದ್ದರು. ರಾಮನಗುಳಿಯಿಂದ ಕಮ್ಮಾಣಿ 10 ಕಿ.ಮಿ. ದೂರವಾಗುತ್ತದೆ. ರಾಮನಗುಳಿಯಿಂದ ನಾವು 4 ಜನರು ಬೈಕ್ ನಲ್ಲಿ ಕಮ್ಮಾಣಿ ಕಡೆ ಹೋದೆವು. ಕಮ್ಮಾಣಿಯಿಂದ ಮದ್ದಿನ ಬೈಲ್ 4 ಕಿ.ಮಿ. ದೂರವಾಗುತ್ತದೆ. ಮದ್ದಿನ ಬೈಲ್ ಅನ್ನು ನಾವು ಸಂಜೆ 4 ರಿಂದ 4.30 ರ ಸಮಯದಲ್ಲಿ ತಲುಪಿರುತ್ತೇವೆ. ಆ ದಿನ ನಾವು 4 ಜನ ಬೇರೆ ಬೇರೆ ಬೈಕಿನಲ್ಲಿ ಒಟ್ಟೊಟ್ಟಿಗೆ ಹೋಗಿರುತ್ತೇವೆ. ಬೈಕ್ ನಲ್ಲಿ ಹೋಗುತ್ತಿರುವಾಗ ಸದ್ರಿ ಪ್ರಕರಣದ ಬಗ್ಗೆ ಮಾಹಿತಿಯನ್ನು ಚಾಸಾ-4 ರವರು ಕೊಟ್ಟಿರುತ್ತಾರೆ. ಮಾಹಿತಿ ಕೊಟ್ಟ ಅರ್ಧ ಗಂಟೆಯಲ್ಲಿ ಮದ್ದಿನ ಮನೆಯನ್ನು ತಲುಪಿರುತ್ತೇವೆ.

5. 1 ನೇ ಆರೋಪಿಯ ಪರಿಚಯ ನನಗೆ ಇರುತ್ತದೆ. 1 ನೇ ಆರೋಪಿಯ ಜಮೀನನ್ನು ಎಷ್ಟು ಗಂಟೆಗೆ ನೋಡಿರುತ್ತೇನೆ ಎಂದು ನನಗೆ ಸಮಯ ನೆನಪಿರುವುದಿಲ್ಲ ಅದು ಯಾವ ದಿನ ಎಂದರೆ 5 ನೇ ತಾರೀಖು

ಜನವರಿ ತಿಂಗಳು 2022 ನೇ ಇಸವಿ. ಮದ್ದಿನ ಮನೆಯ ನಾಲದಲ್ಲಿ ನೀರು ಹರಿಯುತ್ತಿತ್ತು. ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿರುವ ನಿಪಿ–2, 5 ಮತ್ತು 6 ರ ಫೋಟೊವನ್ನು ನೋಡಿ ಅದರಲ್ಲಿ ನೀರು ಹರಿಯುತ್ತಿರುವುದು ಕಾಣುತ್ತದೆ ಎಂದು ಕೇಳಿದಾಗ ಸದ್ರಿ ನೀರು 2 ಅಡಿಯಲ್ಲಿ ಹರಿಯುತ್ತಿರುತ್ತದೆ ನೀರು ಎಂದರೆ ಯಾವುದು ಕಲ್ಲು ಎಂದರೆ ಯಾವುದು ಎಂದು ಗುರುತಿಸುವ ಸಾಮಾನ್ಯ ಪ್ರಜ್ಞೆ ನನಗೆ ಇರುತ್ತದೆ. ನಿಪಿ–4 ಮತ್ತು 5 ರಲ್ಲಿ ಕಲ್ಲನ್ನು ಬಿಟ್ಟರೆ ನೀರು ಹರಿಯುವುದು ಎಲ್ಲೂ ಕಾಣುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಮನೆ ದೊಡ್ಡ ಕಟ್ಟೆಯಲ್ಲಿರುವುದು ಆತನ ವಾಸ್ತವ್ಯದ ಮನೆ ಅಲ್ಲೆ ಇರುತ್ತದೆ ಎಂದರೆ ಸರಿ. ದೊಡ್ಡ ಕಟ್ಟೆಯಿಂದ ಮದ್ದಿನ ಮನೆಯ ನಾಲೆಗೆ 1 ಕಿ.ಮಿ. ದೂರವಾಗುತ್ತದೆ. 1 ನೇ ಆರೋಪಿಯು ದೊಡ್ಡ ಕಟ್ಟೆಯಲ್ಲಿ ವಾಸವಾಗಿರುತ್ತಾನೆ.

6. ನಾನು 9 ನೇ ತರಗತಿಯವರೆಗೆ ಓದಿರುತ್ತೇನೆ. ಪಂಚನಾಮೆಯನ್ನು ಇದೆ ರೀತಿಯಾಗಿ ಬರೆಯಬೇಕು ಎಂದು ನಾನು ನಿರ್ದೇಶನವನ್ನು ಕೊಟ್ಟಿಲ್ಲ. ಪಂಚನಾಮೆಯಲ್ಲಿ ಏನೆಲ್ಲ ಬರೆದರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ನಿರ್ದಿಷ್ಟವಾಗಿ ಏನೆಲ್ಲ ಬರೆದಿರುತ್ತದೆ ಎಂದು ನಿಮಗೆ ಹೇಳಲು ಬರುತ್ತದಾ ಎಂದರೆ ನಾನು ಅದನ್ನು ನೋಡಿ ಹೇಳಬಲ್ಲೆ. ಅದನ್ನು ನೋಡದೆ ಇದೇ ರೀತಿಯಾಗಿ ಬರೆದಿರುತ್ತದೆ ಎಂದು ಹೇಳಲು ಬರುವುದಿಲ್ಲ.

7. ಯಾವುದೇ ಒಂದು ಪ್ರಾಣಿಯ ಚರ್ಮವನ್ನು ಸುಟ್ಟರೆ ಅದು ಮೆಲ್ಟಾಗುತ್ತದೆ ಎಂದರೆ ಸರಿ. ಅದೇ ರೀತಿಯಾಗಿ ಆ ಪ್ರಾಣಿಯ ವಸಡನ್ನು ಸುಟ್ಟಾಗಾ ಅಟ್ಟೆಯು ಕೂಡ ಸುಟ್ಟು ಹೋಗುತ್ತದೆ ಎಂದರೆ ಸರಿ. ನಿಪಿ–5 ರ ಫೋಟೊದಲ್ಲಿ ಪ್ರಾಣಿಯ ತಲೆ ಮತ್ತು ಬಾಲ ಇಲ್ಲ ಎಂದರೆ ಬಾಲ ತೆಗೆದಿರುತ್ತಾರೆ ತಲೆ ಇರುತ್ತದೆ. ನಿಪಿ–2 ರ ಫೋಟೊದಲ್ಲಿ ತಲೆ ಕಾಣುತ್ತಿರುತ್ತದೆ. ನಿಪಿ–2 ರ ಫೋಟೊದಲ್ಲಿ ಪ್ರಾಣಿಯ ಕಾಲು ಸುಟ್ಟಂತೆ ಕಾಣುತ್ತಿರುತ್ತದೆ. ಪ್ರಾಣಿಯ ಚರ್ಮವನ್ನು ಸುಟ್ಟಾಗ ಮಾಂಸ ಕಂದು ಬಣ್ಣಕ್ಕೆ ತಿರುಗುತ್ತದೆ ಎಂದರೆ ಸರಿ. ನಿಪಿ–2 ರ ಫೋಟೊದಲ್ಲಿ ಇರುವ ಪ್ರಾಣಿಯ ಮಾಂಸ ಕೆಂಪ್ಪಾಗಿ ಕಾಣುತ್ತದೆ ಎಂದರೆ ಸರಿ. ಯಾವುದೇ ಒಬ್ಬ ವ್ಯಕ್ತಿ ತಪ್ಪನ್ನು ಮಾಡಿದರೆ ಆತನು ಓಡಿಹೋಗುವ ಪ್ರಯತ್ನ ಮಾಡುತ್ತಾನೆ ಎಂದರೆ ಸರಿ. ನಿಪಿ–5 ರಲ್ಲಿ ಕಾಣುವ 1 ಮತ್ತು 2 ನೇ ಆರೋಪಿತರು ನಿರ್ಭಿತಿಯಿಂದ ನಿಂತಿರುತ್ತಾರೆ ಎಂದರೆ ಸರಿ. ಕಮ್ಮಾಣಿ ಹಳ್ಳವಳ್ಳಿ ಪುರ್ನವಸತಿ

ಪ್ರದೇಶ ಎಂದರೆ ಸರಿ. ಅಲ್ಲಿ ಬ್ರಾಹ್ಮಣ ಮತ್ತು ಇತರ ಜಾತಿಯವರ ಮನೆ ಇರುತ್ತದೆ ಎಂದರೆ ಸರಿ. ಮದ್ದಿನ ಮನೆ ಎನ್ನುವುದು ಜನ ವಸತಿ ಇರುವ ಪ್ರದೇಶ ಎಂದರೆ ಸರಿ. ನೀವು ಸರಿಯಾಗಿ ಕೆಲಸ ಮಾಡದಿದ್ದರೆ ಚಾಸಾ-1 ರವರು ಹೇಳಿದಂತೆ ನೀವು ಕೇಳದೆ ಇದ್ದರೆ ಅವರು ನಿಮ್ಮ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಬಹುದು ಎಂದರೆ ಸರಿ. ನಿಮ್ಮ ಅರಣ್ಯ ಇಲಾಖೆಯ ರಕ್ಷಕರು ಮತ್ತು ಸಿಬ್ಬಂದಿಯವರು ಸರಿಯಾಗಿ ಕೆಲಸ ಮಾಡಿಲ್ಲ ಎಂದು ಸಾರ್ವಜನಿಕ ಪ್ರಕಟಣೆ ದಿನನಿತ್ಯದ ಪತ್ರಿಕೆಯಲ್ಲಿ ಬಂದಿತ್ತು ಎಂದರೆ ಸರಿಯಲ್ಲ. ಅರಣ್ಣ ಸಿಬ್ಬಂದಿಯವರು ಅದರಿಂದ ತಪ್ಪಿಸಿಕೊಳ್ಳಬೇಕು ಎಂದು ಉದ್ದೇಶದಿಂದ ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುಮಾ-1 ಅರಣ್ಯ ಇಲಾಖೆಯಲ್ಲಿ ಸಾಕಷ್ಟು ಸಿಗುತ್ತದೆ ಎಂದರೆ ಸರಿ. ನೀವು ಘಟನೆ ನಡೆಯಿತು ಎಂದು ಹೇಳಲಾದ ಸ್ಥಳಕ್ಕೆ ಹೋದಲಿಂದ ಆ ಕರೆಂಟಿನ ಕಂಬ ಎಷ್ಟು ದೂರದಲ್ಲಿತ್ತು ಎಂದರೆ ನನಗೆ ನೆನಪಿಲ್ಲ. ಇಂತಹ ತಂತಿಯಿಂದ ನೇರವಾಗಿ ಲೈನಿಗೆ ಕೊಟ್ಟು ಬೇಲಿಗೆ ತಂತಿಯನ್ನು ಕೊಟ್ಟು ವಿದ್ಯುತ್ ಹಾಯಿಸಲು ಬರುತ್ತದಾ ಎಂದರೆ ಹೌದು. ಸದ್ರಿ ಮುಮಾ-1 ರ ತಂತಿಯಿಂದ ಸರ್ವಿಸ್ ವೈಯರ್ ಅನ್ನು ಕಟ್ಟಿ ವಿದ್ಯುತ್ ಅನ್ನು ಹಾಯಿಸಬೇಕಾಗುತ್ತದೆ ಎಂದರೆ ಹೌದು. ಮುಮಾ-1 ರ ತಂತಿ ಅಲ್ಲಿ ಒಟ್ಟು ಎಷ್ಟು ಇತ್ತು ಎಂದರೆ ಒಂದೆ ಇತ್ತು. ಸದ್ರಿ ಮುಮಾ-1 ನಿಮ್ಮ ಅರಣ್ಯ ಇಲಾಖೆಯ ಈ ಪ್ರಕರಣಕ್ಕೆ ಸೃಷ್ಟಿ ಮಾಡಿ ಒಂದು ತಂತಿ ಎಂದರೆ ಸರಿಯಲ್ಲ. ಯಾವುದಾದರೂ ಇತರದ ತಂತಿಯನ್ನು ಬೇಲಿಗೆ ಅಳವಡಿಸಲು 10-15 ಇನ್ಸ್ ಸೂಲೆಟರ್ ಬೇಕಾಗುತ್ತದೆ ಎಂದರೆ ಸರಿ. ಸದ್ರಿ ಇನ್ಸ್ ಸೂಲೆಟರ್ ಮುಮಾ-1 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ಸದ್ರಿ ಇನ್ಸ್ ಸೂಲೆಟರ್ ಕಟ್ಟಿದ್ದಾಗ ತಂತಿಗೆ ಮಾರ್ಕ್ ಬೀಳುತ್ತದೆ ಎಂದರೆ ನೀರು ಬಿದ್ದಾಗ ಮಾತ್ರ ನೀರು ಬೀಳುತ್ತದೆ. ಐಬೆಕ್ಸ್ ತಂತಿಯನ್ನು ಮುಮಾ-1 ರ ತಂತಿಯಂತೆ ಸುತ್ತಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನೀವು ದಿನಾಂದಕ 05-01-2022 ರಂದು ಮದ್ದಿನ ಮನೆ ನಾಲಕೆ ಹೋಗಿಲ್ಲ ಎಂದರೆ ಸರಿಯಲ್ಲ. ಅಲ್ಲಿ ನೀವು ಯಾವುದೇ ಹಂದಿಯನ್ನು ನೋಡಿ ಹಾಗೂ ಅದರಂತೆ ಪಂಚನಾಮೆಯನ್ನು ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ 07-01-2022 ರಂದು ನೀವು ಮತ್ತು ಅರಣ್ಯ ಸಿಬ್ಬಂದಿಯವರು ಆ ಹಂದಿಯನ್ನು ಸುಟ್ಟು ಹಾಕಿರುತ್ತೇವೆ ಎಂದು ಸುಳ್ಳು ಹೇಳಿರುತ್ತೀರಿ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ 1 ರಿಂದ 4 ನೇ ಆರೋಪಿಗೆ ಯಾವುದೇ ಸಂಬಂಧವಿಲ್ಲ

ಎಂದರೆ ಸರಿಯಲ್ಲ. ಚಾಸಾ–1 ರವರು ಅಂಕಿಅಂಶಕೊಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿದ್ದು, ಅವರ ಚಿತಾವಣಿಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ–2 ರಿಂದ 7 ಹಾಗೂ ನಿಪಿ–12 ರಿಂದ 14 ಫೊಟೊವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲೋ ಸಿಕ್ಕಿದ ಯಾವುದೋ ಪ್ರಾಣಿಯನ್ನು ದುರುಪಯೋಗ ಪಡಿಸಿಕೊಂಡು ಅಂಕಿಅಂಶಕೊಸ್ಕರ ಸುಳ್ಳು ಸಾಕ್ಷ್ಯವನ್ನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೌಕರಿ ಹೋಗಬಹುದು ಎಂಬ ಭಯದಿಂದ ಚಾಸಾ–1 ರವರ ನಿರ್ದೇಶನದ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.